[illegible]ಮಿತ
(ಕ[illegible] ಒಳಪಟ್ಟಿರುತ್ತದೆ).

ನಿಗಮ ಕಾರ್ಯಾಲಯ,
CIN U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-17.
Website : www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020

ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಜ್ಯೋತಿನಗರ/17-18/ ದಿನಾಂಕ : 19-06-2017

# ಜನಸಂಪರ್ಕ ಸಭಾ ನಡಾವಳಿ

ದಿನಾಂಕ 23-08-2017 ರಂದು ಮಧ್ಯಾಹ್ನ 3.00 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ ನರಸಿಂಹೇಗೌಡ, ಅಧೀಕ್ಷಕ ಇಂಜಿನಿಯರ್ (ವಿ), ಸೆಸ್ಕ್, ಮೈಸೂರುರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಲಾಗಿರುತ್ತದೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ಪ್ರತಿನಿಧಿಗಳ ವಿವರ :**

| ಕ.ಸಂ. | ಅಧಿಕಾರಿ/ನೌಕರರ ಹೆಸರು | ಪದನಾಮ | ಉಪ ವಿಭಾಗ/ ಶಾಖೆಯ ಹೆಸರು |
|---|---|---|---|
| 1 | ನಂದೀಶ್. ಎಂ.ಎಸ್ | ಸ.ಕಾ.ನಿ.ಇಂ(ವಿ), | ಜ್ಯೋತಿನಗರ ಉಪ ವಿಭಾಗ |
| 2 | ಯಾಲಕ್ಕಯ್ಯ | ಸ.ಲೆ.ಅ | ಜ್ಯೋತಿನಗರ ಉಪ ವಿಭಾಗ |
| 3 | ಜಮೀರ್ ಪಾಷ | ಸ.ಇಂ(ತಾ), | ಜ್ಯೋತಿನಗರ ಉಪ ವಿಭಾಗ |
| 4 | ಎನ್. ಸೋಮಶೇಖರ್ | ಸ.ಇಂ(ವಿ), | ಜ್ಯೋತಿನಗರ ಶಾಖೆ |
| 5 | ಆರ್.ಶ್ರೀ ಹರ್ಷ | ಕಿ.ಇಂ(ವಿ), | ಜ್ಯೋತಿನಗರ ಶಾಖೆ |
| 6 | ಸ್ವಾಮಿ.ಸಿ | ಸ.ಇಂ(ವಿ), | ಉದಯಗಿರಿ ಶಾಖೆ |
| 7 | ತಿಮ್ಮರಾಜು. ಕೆ.ಟಿ | ಕಿ.ಇಂ(ವಿ), | ಉದಯಗಿರಿ ಶಾಖೆ |
| 8 | ಉಮೇಶ.ಜಿ | ಕಿ.ಇಂ(ವಿ), | ಶಾಂತಿನಗರ ಶಾಖೆ |
| 9 | ಕೆ.ಸಿ ಶೌಕತ್ ಪಾಷ | - | ನಗರ ಪಾಲಿಕೆ ಸದಸ್ಯರು |
| 10 | ಮಹಮ್ಮದ್ ಕಲೀಂ | - | ಗ್ರಾಹಕರು |
| 11 | ಪಾಸೀಂ ಪಾಷ | - | ಗ್ರಾಹಕರು |
| 12 | ಸಿ.ಆರ್.ಅಶ್ವತ್ ನಾರಯಣ | - | ಗ್ರಾಹಕರು |
| 13 | ರಫೀಕ್ ಪಾಷ | - | ಗ್ರಾಹಕರು |
| 14 | ಸನಾವುಲ್ಲಾ | | ಗ್ರಾಹಕರು |
| 15 | ವಿಜಯಲಕ್ಷ್ಮಿ | - | ಗ್ರಾಹಕರು |

ಸಭೆಯಲ್ಲಿ ಚರ್ಚಿಸಿದ

ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರು ಜನಸಂಪರ್ಕ ಸಭೆಗೆ ಎಲ್ಲಾರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕ ಪ್ರತಿನಿಧಿರವರುಗಳ ಮನವಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

**ಶ್ರೀ ಅಶ್ವತನಾರಯಣ, ವಿದ್ಯುತ್ ಗುತ್ತಿಗೆದಾರರು, ಮೈಸೂರುರವರ ಮನವಿ :**

1) ರೆವೆನ್ಯೂ ಬಡಾವಣೆಯಲ್ಲಿರುವ ಮನೆಗಳಿಗೆ ಖಾತಾ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.

ಕೆ.ಇ.ಆರ್.ಸಿ ರೆಗ್ಯೂಲೇಷನ್ 36.01 ರ ರೀತ್ಯಾ ದಾಖಲಾತಿಗಳನ್ನು ಒದಗಿಸಿದರೆ ಖಾತಾ ಬದಲಾವಣೆ ಮಾಡುವುದಾಗಿ ತಿಳಿಸಿರುತ್ತಾರೆ.

2) ಪೋಸ್ಟಲ್ ಅಂಡ್ ಆರ್.ಎಂ.ಎಸ್ ಬಡಾವಣೆಯ ತಾತ್ಕಲಿಕ ಸ್ಥಾವರಗಳಿಗೆ 2 ವರ್ಷ ಅವಧಿ ಮುಗಿದ ನಂತರವೂ ವಿದ್ಯುತ್ ಸಂಪರ್ಕ ನವೀಕರಣ ಮಾಡಿಕೊಡುವಂತೆ ಕೋರಿರುತ್ತಾರೆ.

ಪೋಸ್ಟಲ್ ಅಂಡ್ ಆರ್.ಎಂ.ಎಸ್ ಬಡಾವಣೆಗೆ ವಿದ್ಯುದೀಕರಣಗೊಳಿಸಲು ಸುಮಾರು 5–6 ವರ್ಷಗಳ ಹಿಂದೆಯೇ ಅನುಮೋದನೆ ನೀಡಲಾಗಿದ್ದು, ಕಾಮಗಾರಿ ಅಪೂರ್ಣಗೊಂಡಿದ್ದು ಇದುವರೆವಿಗೂ ವಿದ್ಯುದೀಕರಣಗೊಳಿಸಿರುವುದಿಲ್ಲ ಆದಕಾರಣ ಬಡಾವಣೆಯನ್ನು ಶೀಘ್ರದಲ್ಲಿ ವಿದ್ಯುದೀಕರಣಗೊಳಿಸುವಂತೆ ತಿಳಿಸಲಾಗಿರುತ್ತದೆ.

**ಶ್ರೀ ವಾಹೀದ್ ಖಾನ್, ವಿದ್ಯುತ್ ಗುತ್ತಿಗೆದಾರರು, ಬೀಡಿಕಾಲೋನಿ, ಮೈಸೂರುರವರ ಮನವಿ :**

1) ದೀರ್ಘಕಾಲದಿಂದ ವಿದ್ಯುತ್ ನಿಲುಗಡೆಗೊಂಡಿರುವ ಸ್ಥಾವರಗಳಿಗೆ Part Payment ಪಾವತಿಸಿಕೊಂಡು ಪುನರ್ ಸಂಪರ್ಕ ನೀಡಲು ಕೋರಿರುತ್ತಾರೆ.

ಪುನರ್ ಸಂಪರ್ಕ ಪಡೆಯಲು ಬಾಕಿ, ಹಾಗೂ ವಿದ್ಯುತ್ ನಿಲುಗಡೆಗೊಂಡ ಅವಧಿಯ ನಿಗದಿತ ಶುಲ್ಕ, ಬಡ್ಡಿಯನ್ನು ಪಾವತಿಸಿ, ಪುನರ್‌ಸಂಪರ್ಕ ಪಡೆಯಲು ಸೂಚಿಸಿರುತ್ತಾರೆ.

**ಶ್ರೀ ಅಜೀಜ್ ಅಹಮ್ಮದ್, ವಿದ್ಯುತ್ ಗುತ್ತಿಗೆದಾರರು, ಮೈಸೂರುರವರ ಮನವಿ :**

1) ಕಂದಾಯ ಶಾಖೆಯಿಂದ S.R.Slip ನೀಡುವಾಗ ವಿದ್ಯುತ್ ಬಾಕಿ ಹಾಕಬಾರದೆಂದು ಕೋರಿರುತ್ತಾರೆ.

ಪ್ರಸ್ತುತ ತಿಂಗಳ ಬಿಲ್ಲ್‌ನ ಮೊತ್ತ ಇದ್ದರೆ S.R.Slip ನಲ್ಲಿ ಬಾಕಿ ಹಾಕುವುದಿಲ್ಲ, ಆದರೆ 1 ತಿಂಗಳಿಕ್ಕಿಂತ ಹೆಚ್ಚು ವಿದ್ಯುತ್ ಬಾಕಿ ಹಾಗೂ ಅಧಿಕ ಭದ್ರತಾ ಠೇವಣಿ ಇದ್ದರೆ S.R.Slip ನೀಡುವಾಗ ಬಾಕಿಯನ್ನು ಹಾಕಲಾಗುತ್ತದೆ ಎಂದು ತಿಳಿಸಿರುತ್ತಾರೆ.

**ಶ್ರೀ ಕೆ.ಸಿ ಶೌಕತ್ ಪಾಷ, ವಾರ್ಡ್ ಸಂಖ್ಯೆ–55 ರ ನಗರ ಪಾಲಿಕೆ ಸದಸ್ಯರು, ಮೈಸೂರುರವರ ಮನವಿ :**

1) ಸೆಸ್ಕ್‌ನ 1912 ಗೆ ಕರೆ ಮಾಡಿದ್ದರೆ ಸರಿಯಾಗಿ Response ಸಿಗುವುದಿಲ್ಲ ಹಾಗೂ Line busy ಇರುತ್ತದೆ ಎಂದು ತಿಳಿಸಿರುತ್ತಾರೆ.

ಗ್ರಾಹಕರುಗಳ ದೂರುಗಳು ಇದ್ದರೆ 1912 ಗೆ ಕರೆ ಮಾಡಬೇಕು ಹಾಗೂ ತುರ್ತು ಸಂದರ್ಭ ಸಮಯದಲ್ಲಿ ಸಂಬಂಧಪಟ್ಟ ಶಾಖಾಧಿಕಾರಿಗಳು/ಸ.ಕಾ.ನಿ.ಇಂ (ವಿ) ರವರ ಮೊಬೈಲ್ ಗೆ ಕರೆ ಮಾಡಲು ತಿಳಿಸಿರುತ್ತಾರೆ.

2) ವಾರ್ಡ್ ಸಂಖ್ಯೆ–55 ರ ಪ್ರದೇಶದಲ್ಲಿ ವಿದ್ಯುತ್ ತಂತಿಗಳ ಮೇಲೆ ಹಾದುಹೋಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

ಪ್ರತಿ ಶಾಖೆ ವ್ಯಾಪ್ತಿಯಲ್ಲಿ ಮೆಕ್ಯಾನಿಕ್ ದರ್ಜೆ ನೌಕರರಿಗೆ ಜವಾಬ್ದಾರಿ ನೀಡಿ, ವಿದ್ಯುತ್ ತಂತಿಗಳ ಮೇಲೆ ಹಾದುಹೋಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ.

3) ವಾರ್ಡ್ ಸಂಖ್ಯೆ–55 ರ ಪ್ರದೇಶದಲ್ಲಿ ಕೆಲವಡೆ ಹೊಸ ಕಂಬಗಳನ್ನು ಹಾಕಿದ್ದು, ಹಳೆಯ ಕಂಬಗಳನ್ನು ತೆಗೆಯದೇ ಇರುವುದರಿಂದ ಆದಷ್ಟು ಬೇಗ ಹಳೆಯ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

ಅಧೀಕ್ಷಕ ಇಂಜಿನಿಯರ್(ವಿ) ಮೈಸೂರುರವರು ಒಂದು ವಾರದಲ್ಲಿ ಎಲ್ಲಾ ಹಳೆಯ ಕಂಬಗಳನ್ನು ತೆಗೆಯಲು ಸಂಬಂಧಿಸಿದ ಎಲ್ಲಾ ಶಾಖಾಧಿಕಾರಿಯವರುಗಳಿಗೆ ತಿಳಿಸಿರುತ್ತಾರೆ.

4) ಕಲ್ಯಾಣಗಿರಿನಗರದ ಸಮೀಪ ಅಲ್ಪ ಸಂಖ್ಯಾತ ಜನತೆಗೆ 2 ಸಮುದಾಯ ಭವನವನ್ನು ಕಟ್ಟಿಸಿದ್ದು, ಇದಕ್ಕೆ ವಿದ್ಯುತ್ ಸಂಪರ್ಕವು ಇಲ್ಲದಿರುವ ಕಾರಣ, ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ.

ಸದರಿ ಸಮುದಾಯ ಭವನಗಳು ಕೊಳಚೆ ನಿರ್ಮೂಲನಾ ಮಂಡಳಿಗೆ ಸೇರಿದ್ದು, ಮಂಡಳಿಯ ಮೂಲಕ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

5) ಕಲ್ಯಾಣಗಿನಗರದ ತ್ರಿಕೋನ ಪಾರ್ಕ್ ಗೆ ಹೊಂದಿಕೊಂಡಂತೆ ಇರುವ D.P Structure ಮೇಲಿರುವ ಟ್ರಾನ್ಸ್‌ಫಾರ್ಮರ್‌ನ್ನು Spun Pole ಗೆ ಬದಲಾಯಿಸುವಂತೆ ಕೋರಿರುತ್ತಾರೆ.

ಶಾಂತಿನಗರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**ಶ್ರೀ ಕಲೀಂ, ಅಜೀಜ್ ಸೇಠ್ ನಗರ ಮೈಸೂರುರವರ ಮನವಿ :**

1) ಅಜೀಜ್ ಸೇಠ್ ನಗರದ ಮನೆ ಸಂಖ್ಯೆ 383 ರ ಮುಂದೆ ಇರುವ ಕಂಬದಲ್ಲಿ ಜೋತು ಬಿದ್ದಿರುವ ತಂತಿಗಳನ್ನು ಸರಿಪಡಿಸುವಂತೆ ಕೋರಿರುತ್ತಾರೆ.

ಶಾಂತಿನಗರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

**ಶ್ರೀಮತಿ ವಿಜಯಲಕ್ಷ್ಮಿ , ಉದಯಗಿರಿ, ಮೈಸೂರುರವರ ಮನವಿ**

2) ರಿಂಗ್ ರಸ್ತೆಯಲ್ಲಿ ಇರುವ ಹೈ ಮಾಸ್ಟ್ ಬೀದಿದೀಪ ಕಂಬದ ಮೇಲೆ ಗಿಡದ ಬಳ್ಳಿಗಳು ಹಬ್ಬಿರುವುದರಿಂದ ತೆಗೆದು ಹಾಕಲು ಕೋರಿರುತ್ತಾರೆ.

ಉದಯಗಿರಿ ಶಾಖಾಧಿಕಾರಿಯವರಿಗೆ ಕಂಬದ ಮೇಲೆ ಹೋಗಿರುವ ಗಿಡದ ಬಳ್ಳಿಗಳು ತೆಗೆದು ಹಾಕುವ ಬಗ್ಗೆ ಕ್ರಮ ಕಗೊಳ್ಳಲು ಸೂಚಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಜ್ಯೋತಿನಗರ ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನಿಯರ್(ವಿ), ಜ್ಯೋತಿನಗರ/ಶಾಂತಿನಗರ/ಉದಯಗಿರಿ
4. ಸಲೆಅ/ಕಡತ